ಸ್ವರ್ಣವಲ್ಲೀ ಸ್ವಾಮೀಜಿ ಅಭಿಮತ

# ನಡತೆ, ಶೀಲಕ್ಕೆ ಶಿಕ್ಷಣದಷ್ಟೇ ಮಹತ್ವ ನೀಡಿ

ಪ್ರಜಾವಾಣಿ ವಾರ್ತೆ

ಶಿರಸಿ: 'ಬದುಕಿನ ಪಥದಲ್ಲಿ ನಡತೆ ಹಾಗೂ ಶೀಲಕ್ಕೆ ಶಿಕ್ಷಣದಷ್ಟೇ ಮಹತ್ವವಿದೆ. ವಿದ್ಯಾರ್ಥಿಗಳು ಈ ಅಂಶಗಳತ್ತ ಮಹತ್ವ ನೀಡುವ ಅಗತ್ಯವಿದೆ' ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ತಾಲ್ಲೂಕಿನ ಹುಲೇಕಲ್ ಶ್ರೀದೇವಿ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಂಗಳವಾರ ವಿದ್ಯಾರ್ಥಿಗಳಿಂದ ಸಿದ್ಧವಾದ ಕೈಬರಹ ಪತ್ರಿಕೆಗಳಾದ ಸ್ವರ್ಣದೀಪಿಕಾ, ಅರುಣೋದಯ, ವಿಜ್ಞಾನತರಂಗ ಮತ್ತು ನೆನಪುಗಳು, ಕಾವ್ಯಸಂಕಲನಗಳ ಪುಸ್ತಕವಾದ ಅಂಕುರ ಮತ್ತು ತೋಟಗಾರಿಕಾ ಶಿಕ್ಷಕಿ ಸೀಮಾ ಹೆಗಡೆ ಬರೆದಿರುವ ತೋಟಗಾರಿಕೆ ಪುಸ್ತಕ ಬಿಡುಗಡೆಗೊಳಿಸಿ ಆಶೀರ್ವದಿಸಿದರು.

'ಹನಿ ನೀರು ಸೇವಿಸಿದ ತೆಂಗಿನ ಗಿಡ ತನ್ನ ಬದುಕಿನ ಪರ್ಯಂತ ಅಮೃತ ಸದೃಶವಾದ ಎಳನೀರು ಹಾಗೂ ಫಲವನ್ನು ಕೊಡುತ್ತ ಉಪಕಾರಸ್ಮರಣೆಯನ್ನು ಪ್ರಪಂಚಕ್ಕೆ ತಿರಿಸುತ್ತದೆ. ಹಾಗೆಯೇ ವಿದ್ಯಾರ್ಥಿಗಳು ತಂದೆಯ, ತಾಯಿಯ, ಗುರುಗಳ ಋಣವನ್ನು ತೀರಿಸಬೇಕು' ಎಂದರು.



ಹುಲೇಕಲ್‌ನಲ್ಲಿ ಜರುಗಿದ ಕಾರ್ಯಕ್ರಮವನ್ನು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು

ಇದೇ ವೇಳೆ 2022-23ನೇ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ದತ್ತಿನಿಧಿ ಬಹುಮಾನ ವಿತರಿಸಲಾಯಿತು. ಜತೆಗೆ ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ವಿಭಾಗದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಪ್ರೋತ್ಸಾಹಿಸಲಾಯಿತು.

ಪತ್ರಕರ್ತ ಹರಿಪ್ರಕಾಶ ಕೋಣೆಮನೆ, ಸಂಸ್ಥೆಯ ಉಪಾಧ್ಯಕ್ಷ ಎಂ.ಎಸ್.ಹೆಗಡೆ ಇಟಗುಳಿ, ಕಾರ್ಯದರ್ಶಿ ಶಾಂತಾರಾಮ ಹೆಗಡೆ ಹೋಸ್ತೋಟ ಉಪಸ್ಥಿತರಿದ್ದರು. ಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಎನ್. ಹೆಗಡೆ ಸ್ವಾಗತಿಸಿದರು. ಸಂಗೀತ ಶಿಕ್ಷಕಿ ಸುಮಾ ಹೆಗಡೆ ಅವರ ನಿರ್ದೇಶನದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಪ್ರಾಚಾರ್ಯ ಡಿ.ಆರ್. ಹೆಗಡೆ ವರದಿ ವಾಚಿಸಿದರು. ಜಿ.ಯು. ಹೆಗಡೆ ವಂದಿಸಿದರು. ಎ.ಎಸ್.ನಾಯ್ಕ ನಿರ್ವಹಿಸಿದರು.